"ಮಾಮಿಮಾ, ನಾನು ನಿಮ್ಮ ಅನ್ನ ತಿಂದಿದಿನಿ. ಬಟ್ಟೆ ಉಟ್ಟಿದಿನಿ. ನಂಗೂ ಅದರ ಬಗ್ಗೆ ಗೋರವ ಐತೆ, ನಾನು ಕೆಲ್ಸ ಬಿಡ್ತೀನಿ. ಅಟ್ಟೇಯ, ಬೇರೆ ಏನೂ ಬಾಯಿ ಬಿಡುದಿಲ್ಲ."

ಜುಂಪಾಳ ಮಾತು ಕೇಳಿ ನಾನು ಚಕಿತಳಾದೆ, ಅವಳ ಮಾತು ಬಿರುಗಾಳಿ ಬರುವುದರ ಮುನ್ಸೂಚನೆಯಂತಿತ್ತು! ಆ ಹುಡುಗಿ ಏನ್ ಹೇಳಬೇಕು ಅಂದುಕೊಂಡವ್ಳೆ?

"ಬಾಯಿ ಬಿಡೂದಿಲ್ಲ ಅಂದ್ರೆ, ಏನ್ ಹೇಳ್ಬೇಕು ಅಂತಿದಿಯಾ ನೀನು?"

"ನೀವು, ತಮ್ಮ ಪಾಡಿಗೆ ತಾವಿರೋ ನಿಮ್ಮ ಮನೆಯವರನ್ನೇ ಕೇಳಿ" ಜುಂಪಾ ತಟ್ಟಂತ ಎದ್ದು ನಿಂತ್ಕೊಂಡಳು. ಕಣ್ಣೆರಡು ಬೆಂಕಿಯುಂಡೆಯಂತಿದ್ದವು. ಅವಳ ದೃಢಸ್ವರ ಕ್ಷಣ ಅಲುಗಾಡಿತು, "ಅವನು ಕೆಟ್ಟವನು, ಯಾಕಂದ್ರೆ ಅವರು ಸಣ್ಣಜನ! ನೀವು ದೊಡ್ಡಜನ! ಆ ದಿನ ನನಗೆ ಆ ಸಣ್ಣಜನಾನೇ ಕಾಪಾಡಿದ್ದು, ಇಲ್ಲದಿದ್ರೆ ಈ ದೊಡ್ಡೋರು ಕೈಲಿ ನಾನು" ಜುಂಪಾ ಮಾತು ಮುಗಿಸಲಿಲ್ಲ. ಅಮ್ಮನ ಕೈ ಹಿಡ್ಕೊಂಡು ದರದರ ಎಳ್ಕೊಂಡು ಹೊರಟೋದ್ಲು, ಪಾರ್ಲರ್‌ನ ಯಜಮಾನಿ ಮಾತಿಲ್ಲದೆ ನಿಶ್ಚಲಳಾಗಿ ಕೂತಬಿಟ್ಟಳು! ಪಾರ್ಲರ್‌ನಲ್ಲಿ ಅಸಹನೀಯ ಮೌನ ಆವರಿಸಿಕೊಂಡಿತು. ಯಾರೂ ಏನೂ ಮಾತಾಡ್ತಾಯಿಲ್ಲ. ಎಲ್ಲರೂ ಕಲ್ಪನೆಗೆ ಮೀರಿದ ದೃಶ್ಯವನ್ನು ಕಂಡಂತೆ ಆ ಪಾರ್ಲರ್‌ನ ಯಜಮಾನಿಯನ್ನು ನೋಡ್ತಾಯಿದ್ದರು!

ನನ್ನ ಪಕ್ಕದಲ್ಲಿ ಕೂತಿದ್ದ ಆ ಹುಡುಗಿ ತನ್ನ ಮೊಬೈಲ್ ಫೋನ್ ಬಿಟ್ಟು ಹಿಂದೆ ತಿರುಗಿ ಯಜಮಾನಿಯನ್ನು ದಿಟ್ಟಿಸಿದಳು. ನನ್ನ ಕೂದಲು ಕತ್ತರಿಸಿಯಾಗಿತ್ತು. ಕಾಕೊಲಿ ಹೆಸರಿನ ಆ ಹುಡುಗಿ ಬ್ರಶಿಂದ ಅಭ್ಯಾಸಬಲದಿಂದೆಂಬಂತೆ ನನ್ನ ಮೈ ಮೇಲಿನ ಕೂದಲನ್ನು ಕೊಡವತೊಡಗಿದಳು. ಅವಳೇ ಬಿಲ್ ಬರೆದು ಕೊಟ್ಟಳು. ಪಾರ್ಲರ್‌ನ ಯಜಮಾನಿ ಬಾಗಿಲೆಡೆ ದೃಷ್ಟಿನೆಟ್ಟು ಮೂಕಳಂತೆ ಕೂತಿದ್ದಳು. ಅವಳ ಬಾಯಿಂದ ಒಂದೂ ಮಾತಿಲ್ಲ.

ನಾನು ಹೊರಗೆ ಬಂದು ಗಾಡಿ ಹತ್ತುತ್ತಾ ನಾಲ್ಕೂಕಡೆ ದಿಟ್ಟಿಸಿದೆ. ಇಲ್ಲ, ಮಳೆಯೊಳಗೆ ಜುಂಪಾ ಮತ್ತು ಚಂಪಾ ನನಗೆ ಕಾಣಿಸಲಿಲ್ಲ.


### ಶ್ರಾವಸ್ತಿ ಬಸು

ಅನೇಕ ವರ್ಷಗಳಿಂದ ಸ್ಕ್ರಿಪ್ಟ್ ರೈಟಿಂಗ್ ವೃತ್ತಿಯಲ್ಲಿದ್ದಾರೆ. ಸಣ್ಣಕತೆ, ಲಲಿತ ಪ್ರಬಂಧ ಬರೆಯುತ್ತಾರೆ. ಪ್ರವಾಸ ಹೋಗುವುದು, ಫೌಂಟೇನ್ ಪೆನ್ನುಗಳನ್ನು ಸಂಗ್ರಹಿಸುವುದು ಇವರ ಹವ್ಯಾಸ. ಕೋಲ್ಕತ್ತದಲ್ಲಿ ನೆಲೆಸಿದ್ದಾರೆ.

### ನಾಗಮಣಿ ಎಸ್.ಎನ್.

ಮೂಲತಃ ಮಂಡ್ಯ ಜಿಲ್ಲೆ ಶಿವಾರ ಗ್ರಾಮದವರು; ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಕನ್ನಡ ಪ್ರಾಧ್ಯಾಪಕಿಯಾಗಿದ್ದರು. ಶಿಕ್ಷಣ ಕ್ಷೇತ್ರ, ಭಾಷಾ ಬೋಧನೆ, ಮಹಿಳಾ ವಿಷಯಗಳಲ್ಲಿ ಆಸಕ್ತಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಭಾಷಾಂತರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ.

### ಸರಸಿಜ್ ರಾಯ್ ಚೌಧುರಿ

ಮೂಲತಃ ಕೋಲ್ಕತ್ತದವರು. ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಬೆಂಗಳೂರಿನಲ್ಲಿರುವ ರಾಮನ್ ಸಂಶೋಧನಾ ಸಂಸ್ಥೆಯಲ್ಲಿ ಅಧ್ಯಯನ ನಡೆಸಿ ಭೌತಶಾಸ್ತ್ರದಲ್ಲಿ ಪಿಎಚ್. ಡಿ. ಪದವಿ ಪಡೆದಿದ್ದಾರೆ. ಬಂಗಾಲಿ, ಇಂಗ್ಲಿಷ್, ಕನ್ನಡ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ. ಪ್ರಸ್ತುತ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕೆಲಸ ಮಾಡುತ್ತಿದ್ದಾರೆ.